ಎರಡು ಕೇಜಿ ಕಡಲೆ ಬೇಳೆ ತರಿಸಿ ಏಲಕ್ಕಿ ತೆಂಗಿನಕಾಯಿ ತುರಿ ಹಾಕಿ ಘಮಘಮ ಒಬ್ಬಟ್ಟು ಮಾಡಿದ್ದಳು. ಒಬ್ಬಟ್ಟಿನ ಘಮಲು ಇಡೀ ಊರನ್ನೇ ಸುತ್ತಿಕೊಂಡು ಅನೂಹ್ಯಳಿಗೆ ಸಂಭ್ರಮದ ಸ್ವಾಗತವನ್ನು ಕೋರಿದಂತಿತ್ತು. ಕೇರಿಯ ಸಣ್ಣ ಮಕ್ಕಳು ಅನೂಹ್ಯಳ ಕೆಂಪು ಕಾರಿನ ಗ್ಲಾಸಿನಲ್ಲಿ ತಮ್ಮ ಮುಸುಡಿಗಳನ್ನು ನೋಡಿಕೊಂಡು ಕ್ರಾಪುಗಳನ್ನು ತೀಡಿಕೊಳ್ಳುತ್ತಿದ್ದರು. ಬ್ರೆಕ್ಟನ ತಂಗಿಯರು ತಮಗೆ ಒಳ್ಳೆಯ ಅತ್ತಿಗೆಮ್ಮ ಸಿಕ್ಕಿದಳೆಂದು ಹಿಗ್ಗಿ ಹೀರೇಕಾಯಿಗಳಾಗಿದ್ದರು. ಅನೂಹ್ಯ ತಾನು ಅದೇ ಹಳ್ಳಿಯಲ್ಲಿ ಹುಟ್ಟಿದವಳೇನೋ ಅನ್ನುವಷ್ಟು ಸಹಜವಾಗಿ ವರ್ತಿಸುತ್ತಿದ್ದಳು. ಅನೂಹ್ಯ ಎಮ್ಮೆಯ ತುಪ್ಪದಲ್ಲಿ ಮೂರು ಒಬ್ಬಟ್ಟನ್ನು ತಿಂದಿದ್ದಳು. ರಾತ್ರಿ ಕೋಣೆಯಂತಿದ್ದ ಅಡುಗೆ ಮನೆಯಲ್ಲಿ ಚಾಪೆಯ ಮೇಲೆ ರಗ್ಗು ಹಾಸಿ ಅನೂಹ್ಯಳಿಗೆ ಮಲಗಲು ವ್ಯವಸ್ಥೆ ಮಾಡಿ ಬ್ರೆಕ್ಟ್ ಸಮೇತ ಎಲ್ಲರೂ ನಡುಮನೆಯಲ್ಲಿ ಮಲಗಿದರು. ಬ್ರೆಕ್ಟನ ತಾಯಿ ''ಮಗ ಹುಡ್ಗಿ ಒಬ್ಳೆ ಹೆದುರ್ಕೋಂಡ್ ಗಿದುರ್ಕೊಂಡಾಳು, ನೀನೂ ಹೋಗಿ ಅಲ್ಲೆ ಮಲ್ಕೋಗು'' ಎಂದಿದ್ದಳು. ಬ್ರೆಕ್ಟ್ ಹೋಗಿ ಅನೂಹ್ಯಳ ಪಕ್ಕ ಜಾಗ ಬಿಟ್ಟು ಮಲಗಿದ. ಅಷ್ಟೊತ್ತಿಗೆ ಅನೂಹ್ಯ ನಿದ್ದೆ ಹೋಗಿದ್ದಳು. ಅವನಿಗೂ ಮಂಪರು ಕವಿಯತೊಡಗಿತ್ತು. ಆಗ ಅನೂಹ್ಯ ಇದ್ದಕ್ಕಿದ್ದಂತೆ ಬ್ರೆಕ್ಟನನ್ನು ತಬ್ಬಿಕೊಂಡು ಮುತ್ತಿಡತೊಡಗಿದಳು. ಓಹ್! ಬ್ರೆಕ್ಟನಿಗೆ ಸ್ವರ್ಗದಲ್ಲಿ ತೇಲುತ್ತಿರುವಂಥ ಅನುಭವ. ಅವನೂ ಸ್ಪಂದಿಸತೊಡಗಿದ. ಇಬ್ಬರೂ ಬೆತ್ತಲಾಗಿ ಒಬ್ಬರನ್ನೊಬ್ಬರು ಆವರಿಸಿಕೊಂಡಿದ್ದರು. ಆಗ ಸಡನ್ನಾಗಿ ಬ್ರೆಕ್ಟನ ದೇಹ ತಣ್ಣಗಾಗಿತ್ತು. ಅರೆ, ಅನೂಹ್ಯಳ ಬದಲಾಗಿ ದೊಡ್ಡ ಸರ್ಪವೊಂದು ತನ್ನ ದೇಹವನ್ನು ಸುತ್ತಿಕೊಂಡಿದೆ. ಸರ್ಪಕ್ಕೆ ಅನೂಹ್ಯಳ ಮುಖ. ಅದರಲ್ಲೀಗ ಕೋರೆ ಹಲ್ಲುಗಳು ಮೂಡಿವೆ. ತನ್ನನ್ನು ನುಂಗಲು ಬಾಯಿ ತೆರೆದು ಸರ್ಪ ಬುಸುಗುಡುತ್ತಿದೆ. ಆ ಸರ್ಪ ತನ್ನ ಕೈಕಾಲುಗಳನ್ನು ಕಟ್ಟಿಹಾಕಿದೆ. ಬ್ರೆಕ್ಟ್ ಭಯದಿಂದ ಜೋರಾಗಿ ಚೀರುವುದರೊಂದಿಗೆ ಎಚ್ಚರವಾಗಿತ್ತು. ಎದ್ದು ಕೂತವನಿಗೆ ಹಾಸ್ಟೆಲ್ ರೂಮಿನ ಮಂಚದ ಮೇಲಿರುವುದು ಅರಿವಿಗೆ ಬಂತು. ರೂಮ್‌ಮೇಟ್ ನರಸಿಂಹ ಮೂರ್ತಿಗೂ ಎಚ್ಚರವಾಗಿ ''ಏನ್ ಬ್ರದರ್ ಅಷ್ಟು ಜೋರಾಗಿ ಕನವರಿಸಿಕೊಂಡೆ. ಎಂಟು ತಿಂಗ್ಳಲ್ಲಿ ನೀನು ಯಾವೊತ್ತೂ ಈ ಥರ ನಿದ್ದೇಲಿ ಕಿರುಚಿಕೊಂಡಿದ್ದಿಲ್ಲ. ಬಹುಶಃ ರುಕ್ಮಿಣಿ ಬಾರಿನ ಎಣ್ಣೆ ಎಫೆಕ್ಟ್ ಇರ್ಬೇಕು...'' ಎಂದು ಆಕಳಿಸಿ ನಿದ್ದೆಗೆ ಜಾರಿದ್ದ. ಕನಸಲ್ಲಿ ಹಾವು ಕಂಡರೆ ಅದು ಕಾಮದ ಪ್ರತೀಕ ಎಂಬುದನ್ನು ಎಲ್ಲೋ ಓದಿದ್ದು ಬ್ರೆಕ್ಟನಿಗೆ ನೆನಪಾಗಿತ್ತು. ನರಸಿಂಹ ಮೂರ್ತಿ ಗೊರಕೆ ಹೊಡೆಯುತ್ತಿದ್ದ. ಬ್ರೆಕ್ಟ್ ರೀಸಸ್ ಮಾಡಿ ಬಂದು ಉರುಳಿಕೊಂಡ. ನಿದ್ದೆ ಮಾಡಬೇಕೆನಿಸಿದರೂ ಮಂಪರು ಆವರಿಸುತ್ತಿಲ್ಲ. ಅನೂಹ್ಯಳನ್ನು ನೆನಪಿಸಿಕೊಂಡು ಮುಷ್ಟಿಮೈಥುನ ಮಾಡಿಕೊಂಡ. ಸ್ವಲ್ಪ ಹೊತ್ತಿನಲ್ಲಿಯೇ ಬ್ರೆಕ್ಟ್ ನಿದ್ದೆಯ ಪಾಲಾದ.

ಭಾನುವಾರ ಒಂದು ಗಂಟೆಗೆ ಕರೆಕ್ಟಾಗಿ ಬ್ರೆಕ್ಟ್ ಬ್ರಿಗೇಡ್ ರಸ್ತೆಯ ಮೈಡ್ರೀಮ್ ಹೋಟೆಲ್ ಮುಂದೆ ನಿಂತಿದ್ದ. ಡಿಗ್ರಿಯಲ್ಲಿ ಓದುವಾಗ ಅದರ ಮುಂದೆ ಎಷ್ಟೋ ಸಾರಿ ಓಡಾಡಿದ್ದರೂ ಒಳಗಡೆ ಪ್ರವೇಶಿಸಿರಲಿಲ್ಲ. ಐದು ನಿಮಿಷಗಳಲ್ಲಿ ಅನೂಹ್ಯ ಪ್ರತ್ಯಕ್ಷವಾಗಿದ್ದಳು. ಜೀನ್ಸ್ ಪ್ಯಾಂಟ್ ಮತ್ತು ಕಡುನೀಲಿ ಟಾಪ್‌ನಲ್ಲಿ ಕಂಗೊಳಿಸುತ್ತಿದ್ದಳು. ಪಕ್ಕದಲ್ಲಿ ಅವಳಷ್ಟೇ ಸುಂದರವಾಗಿದ್ದ ಯುವಕ. ''ಬೈದಿಬೈ ಬ್ರೆಕ್ಟ್ ಇವನು ನನ್ನ ಸೋದರಮಾವನ ಮಗ ಕಾರ್ತಿಕ್'' ಎಂದು ಅವನನ್ನು ಪರಿಚಯಿಸಿದ್ದಳು. ಯುವಕ ಕೈ ಕುಲುಕುತ್ತಾ ''ಹಲೋ ಮಿಸ್ಟರ್ ಬ್ರೆಕ್ಟ್, ನಿಮ್ಮ ಬಗ್ಗೆ ಅನೂಹ್ಯ ಎಲ್ಲಾ ಹೇಳಿದ್ದಾಳೆ. ಪ್ಲೆಸರ್ ಟು ಮೀಟ್ ಯು'' ಎಂದಿದ್ದ. ಮೂವರೂ ಟೇಬಲೊಂದನ್ನು ಅಲಂಕರಿಸಿದ್ದರು. ಬರಿ ಯುವಕ ಯುವತಿಯರೇ ತುಂಬಿದ್ದರು. ಹುಡುಗ ಹುಡುಗಿಯರೆಂಬ ಭೇದ ಭಾವವಿಲ್ಲದೆ ಬಿಯರ್ ಕುಡಿಯುತ್ತಾ ತಮ್ಮದೇ ಲೋಕಗಳಲ್ಲಿ ವಿಹರಿಸುತ್ತಿದ್ದರು.

''ಬಿಯರ್ ಕುಡಿಯುತ್ತೀರಾ. ಫ್ರೆಶ್ ಡ್ರಾಟ್ ಬಿಯರ್'' ಕಣ್ಣಗಲಿಸಿ ಕೇಳಿದ್ದಳು.

''ಊಂ'' ಎಂದಿದ್ದ. ಮೂರು ಮೊಗ್ ಬಿಯರ್ ಬಂದಿತ್ತು. ಜೊತೆಗೆ ಫಿಶ್ ಫ್ರೈ. ಚಿಯರ್ಸ್ ಹೇಳಿ